ನೆಟ್ಟುಹೋತು. ಇಷ್ಟ ದಿನಾ ಹೆಣ್ಣಿನ ದೇಹಾನ ಮರೆತಿದ್ದ ಆಚಾರಿ ಮೈ ಮನಸ್ಸು ಒಮ್ಮೆಗೆ ಬೆಚ್ಚಗಾಗಿ ನಡಗಾಕ ಹತ್ತಿದ್ವು. ''ಬುದ್ಧಿ ಇಲ್ಲಿಂದ್ ಓಡು ಅಂದ್ರೂ. ಕಾಲು ಓಡ್ಲಿಲ್ಲ. ತಲಿ ಕೆಟ್ಟೋರಂಗ ಪಾರವ್ವನ ಎದಿ – ಮೈಯೆಲ್ಲಾ ಹುಚ್ಚರಂಗ ಸವರಾಕ ಹತ್ತಿದ್ರು. ಲೊಚ ಲೊಚಾ ಮುದ್ದುಗರ್ಯಾಕ ಹತ್ತಿದ್ರು. ಇನ್ನ ಸ್ವಲ್ಪ ಹೊತ್ ಇದ್ದಿದ್ರ ಅವತ್ತ ಏನ್ ಅನಾಹುತಾ ಆಗ್ತಿತ್ತೋ ಏನೋ. ಮಾಳಿಗಿ ಮ್ಯಾಲ ಮುಗುಲು ಹರ್ಕೊಂಡ್ ಬಿದ್ದಂಗ್ ಖಟ್ ಖಡೀಲ್ ಅಂತ ದೊಡ್ಡ ಸಿಡ್ಲು ಬಿದ್ದು, ಶ್ರೀಪಾದಾಚಾರು ಕನ್ಸಿಂದ ಎಚ್ಚರಾದವರಂಗ ಪಾರವ್ವನ್ ಬಿಟ್ಟು ಸತ್ನೋ ಕೆಟ್ನೋ ಅನ್ಕೊಂಡು ಅಲ್ಲಿಂದ ಮನೀಗ್ ಓಡಿದ್ರು. ನೀನ ಇವತ್ ಕಾಪಾಡಿದೀ ನನ್ನಪ್ಪಾ... ಶ್ರೀಹರಿ ಅನ್ಕೊಂಡು ಹೆದ್ರಿಕ್ಯೊಂಡು ಗಾಯತ್ರಿ ಮಂತ್ರಾ ಹೇಳಾಕ್ ಹತ್ತಿದ್ರು...''

ಆದ್ರ ಪಾರವ್ವ ಮರೀಲಿಲ್ಲ. ಅದsಕೀ ಚಿತ್ತದಾಗ ನೆಟ್ಟುಹೋತು. ಅಂಥಾ ಜ್ವರದಾಗೂ ಅವ್ರ ಮುತ್ತಿನ ಸುಖದ ಅನುಭೂತಿ ಸವುದ್ ಅಕೀ ದೇಹಾಮನಸು ಕ್ಷಣಕ್ಷಣಕೂ ಅದನ್ನ ಧ್ಯಾನಿಸ್ಕೊತ ಅದನ್ನ ಬಯಸ್ಕೋಂತ ಹೋತು. ರೊಟ್ಟಿಬಡಿಯೂವಾಗ, ಕರಾ ಬಿಟ್ಕೊಂಡು ಹಾಲ್ ಹಿಂಡೂವಾಗ... ಜಳಕಾ ಮುಗ್ಸಿ ಶಿವಪೂಜಿ ಮಾಡೂವಾಗ, ಮಸರ ಕಡ್ಯೂವಾಗ. ಬೆಣ್ಣಿ ಕಾಸೂವಾಗ... ಶ್ರಿಪಾದಾಚಾರಿನ ಕಾಣ್ಸಿದ್ರು. ಅಕೀ ಅಕೀಯಾಗೀ ಉಳೀಲಿಲ್ಲ. ಪಾರವ್ವನೊಳಗ ಆಚಾರ್ರು ತುಂಬಿಹೋಗಿ ಅವ್ರನ್ ಈಗ ನೋಡ್ಬೇಕು ಆಗ ನೋಡ್ಬೇಕೂ ಅಂತಾ ಹಂಬಲ್ಸಾಕ ಹತ್ತಿದ್ಲು.

ಈಗೀಗಂತೂ ಪಾರಮ್ಮ ಮಾಡೂ ಕೆಲ್ಸ ಬಿಟ್ಟು ದಿಗನೆದ್ದು ಎದುರು ಮನಿಗೆ ಹೋಂಟುಬಿಡ್ತಿದ್ಲು. ಅಮ್ಮಾರss ಅಂತಾ ಹೊಚ್ಚಲಾ ದಾಟಿದ್ ಮ್ಯಾಲ ಎಚ್ಚರಾಗ್ತಿದ್ಲು.

ಪುಟ್ಟಜ್ಜೀನೂ – "ಬಾರವಾ ಯಾಕ ಬಂದೀ ಅಂದ್ರ. ಅಕೀ ಹಂತೇಲಿ ಉತ್ರಾ ಇರ್ತಿದ್ದಿಲ್ಲ. ತಡಬಡಿಸಿ – ಇದss ತಗೋರಿ ಎಲಿ ಅಡಕೀ... ಆಚಾರ್ರು ಒದರಿ ಕೇಳಿದ್ರಲ್ಲಾss... ತಂದೇನಿ..."

"ಅಂವಾ ಎಲ್ಯದಾನೀಗ ಆಫೀಸಿಗ್ ಹೋಗ್ಯಾನಲ್ಲ. ಯಾವಾಗ ಎಲಿ ಅಡಕೀಗೆ ಒದರಿದ್ದಾ?" ಪುಟ್ಟಜ್ಜೀ ನೆನಪಾಗದ ಒದ್ದಾಡಿ ಹೋಗ್ಲಿಬಿಡು... ''ಅಲ್ಲಿಡು, ನಾ ಮಡ್ಯಾಗ ಅದೀನಿ'' ಅಂತ ಸುಮ್ಮನಾಗ್ತಿದ್ಲು.

ಫಕೀರಪ್ಪ ಹಂತೇಕ ಬಂದ್ರ ಅದ ತಂಬಾಕು ದೇಸಿ ಶರೆ ವಾಸನಿ ಮಕ್ ಹೊಡ್ದು ವಾಂತೀ ಬರೂಹಂಗಾತು. ಗಂಧಾ –ಮಂತ್ರಾಕ್ಷತೀ ವಾಸನಿ ಅಲ್ಲೆಲ್ಲೋ ಸುಳಿದಾದಂಗ ಪಾರವ್ವ ವಿಲವಿಲಾಂತಿದ್ಲು. ಗಂಡನ ಒರಟು ಮೈ ಅಕೀನ್ ಹಿಸುಕಾಡೋವಾಗೆಲ್ಲ ಆಚಾರ್ರ ಮೆತ್ತಗಿನ ಕೈ ಮೈಯಿಯ ವಾಸನಿ ಅಕೀನ್ ಕರದಂಗಾಗ್ತಿತ್ತು.

ಅತ್ತೀ ಮಂಟವ್ವಂತೂ ಅಕೀಗೆ ಗಾಳಿನೋ ದೆವ್ವನೋ ಹಿಡ್ದಿರಬೇಕ್ ನೋಡ್ ಲಕ್ಷೇಶ್ವರಕ್ಕಾರ ಕರ್ಕೊಂಡ್ ಹೋಗ್ ಅನ್ನಾಕತ್ತಿದ್ಲು.

ಒಮ್ಮೆ ಹೋಳಿ ಹುಣಿಮಿಗೆ ಊರ ಜಗಳವೊಂದ್ ಹತ್ತಿಕೊಂಡ ಓಣಿ ನಾಲ್ಕು ಜನ ಕಚ್ಚಾಡತೊಡಗಿದ್ರು. ಈ ಊರ್ಗೆ ಹೋಳಿ ಹುಣ್ಣಿಮಿ ಅನ್ನೂದು ಖುಶಾಲಿ ಹಬ್ಬಾ ಆಗದ ಹಳೇ ಹಗೆತನ ತೀರಿಸ್ಕೋಳ್ಳೋ ಹಬ್ಬಾನ ಆಗ್ತಿತ್ತು. ಅದು ಇವತ್ತಿನ ಜಗಳಲ್ಲ ಯಾವ್ದೋ ತಾತ ಮುತ್ತಾತರ ಕಾಲದ್ದು. ಈ ವರಸನೂ ಆ ಮೂಲಿಮನಿ ಬಸಪ್ಪಗೂ ಹೊಸಮನಿ ಕಲ್ಲಪ್ಪಗೂ ಗುದ್ದಾಗುದ್ದಿ ಜಗಳ. ಕೊಡ್ಲಿ ಕುಡಗೋಲು ಹಿಡ್ಕೊಂಡ ಓಡ್ಯಾಡಾಕತ್ರು. ಬಿಡಸಾಕ್ ಹೋಗಾವ್ರಿಗೂ ಕೇಡ ತಪ್ಪಿದ್ದಿಲ್ಲ. ಫಕೀರಪ್ಪನೂ ಕುಡಿದು ತೂರ್ಯಾಡಕ್ಕತ್ತಿದ್ದ. ಮೂಲಿಮನೀ ಬಸ್ಯಾ ಕರ್ದಂತ ಅವನೂ ಹೊಂಟಾ ಹೊರಗ.